Block Education Officer, Yelahanka, Bengaluru-64 No. Date.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ಉತ್ತರ ವಲಯ-04, ಯಲಹಂಕ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-64**

**ನಮೂನೆ-03**

**(ನಿಯಮ 4 ಉಪನಿಯಮ (6) 3 ರಂತೆ)**

ಸಂಖ್ಯೆ: ಸಿ1.ಅನು.ಪ್ರಾ.ಶಾ.ಮಾನ್ಯತೆ-26/2020-21 ದಿನಾಂಕ: 07-08-2020

**ಇಮ್ಯಾನುಯಲ್ ಎಜುಕೇಶನ್ ಸೊಸೈಟಿ, ಅರೇಬಿಕ್ ಕಾಲೇಜು ಪೋಸ್ಟ್, ನಾಗವಾರ, ಬೆಂಗಳೂರು-45** ಈ ಆಡಳಿತ ಮಂಡಳಿಯರು ನಡೆಸುತ್ತಿರುವ **ಇಮ್ಯಾನುಯಲ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ನಾಗವಾರ, ಬೆಂಗಳೂರು-45** ಈ ಶಾಲೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 1-1995) ಸೆಕ್ಷನ್ 38 ರಂತೆ ಈ ದಿನದಂದು ತಾತ್ಕಲಿಕ ಮಾನ್ಯತೆ ನೀಡಿದೆ ಎಂದು ಪ್ರಮಾಣೀಕರಿಸಿದೆ.

| | | |
|---|---|---|
| 1. | ನೋಂದಣಿ ಸಂಖ್ಯೆ | 26/2020-21 |
| 2. | ಶಾಲೆಯ ವಿಳಾಸ | **ಇಮ್ಯಾನುಯಲ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ನಾಗವಾರ, ಬೆಂಗಳೂರು-45** |
| 3. | ಈಗಾಗಲೇ ನೀಡಿರುವ ಪ್ರಾವಿಷನಲ್ ಪ್ರಮಾಣ ಪತ್ರದ ಸಂಖ್ಯೆ | 175/2016-17 |
| 4. | ಮಾನ್ಯತೆ ನೀಡಿರುವ ಮಾಧ್ಯಮ | 1-7ನೇ ತರಗತಿ ಆಂಗ್ಲ ಮಾಧ್ಯಮ |
| 5. | ಶಾಲೆ ಅನುದಾನ ಸಹಿತವೇ:ರಹಿತವೇ? | ಶಾಶ್ವತ ಅನುದಾನರಹಿತ |
| 6. | ಮಾನ್ಯತೆ ನೀಡಿರುವ ತರಗತಿಗಳು | 1-7ನೇ ತರಗತಿ ಆಂಗ್ಲ ಮಾಧ್ಯಮ ತಲಾ ಒಂದೊಂದು ವಿಭಾಗಕ್ಕೆ |
| 7. | ಭೇಟಿ ನೀಡಿ ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ಹೆಸರು | ಕ್ಷೇತ್ರ ಶಿಕ್ಷಣಾಧಿಕಾರಿಗಳು,ಬೆಂ.ಉ.ವ.-04, ಯಲಹಂಕ |

ಮೇಲ್ಕಂಡ ಶಾಲೆಗೆ 2020-21ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಐದು (5 ವರ್ಷಗಳಿಗೆ) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ 36,6ಬಿ ಯಂತೆ ಮಾನ್ಯತೆ ನೀಡಿದೆ.

**ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಾನ್ಯತೆ ನೀಡಿದೆ.**

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಬೇಕು.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14-11-95 ರ ನಿಯಮ 4, 5, 6 ಮತ್ತು 8 ರನ್ವಯ ರಾಜ್ಯಪಠ್ಯಕ್ರಮ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
3. ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 116 ವಿವಿಧ 95 ದಿನಾಂಕ: 14-11-95ರ ನಿಯಮ 10 ರಂತೆ ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುತ್ತಿರಬೇಕು ಹಾಗೂ ನಿಯಮ 19 (4) ರಂತೆ ಕ್ರಮ ವಹಿಸಿರಬೇಕು.
4. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 41 (5) ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ನಡೆಸಿರಬೇಕು. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಒಂದು ಸಲ ಮಾತ್ರ ಸ್ಥಳಾಂತರಕ್ಕೆ ಮಾತ್ರ ಅವಕಾಶವಿರುತ್ತದೆ. ಒಂದು ವೇಳೆ ಈ ಅವಧಿಯ ನಂತರ ಸ್ಥಳಾಂತರ/ಹಸ್ತಾಂತರ ಮಾಡಿಸಲಿಚ್ಛಿಸಿದಲ್ಲಿ ಹೊಸ ಸ್ಥಳದಲ್ಲಿ ಹೊಸದಾಗಿ ನೊಂದಣಿ ಮಾನ್ಯತೆಯನ್ನು ಪಡೆಯತಕ್ಕದ್ದು.
5. ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು (ಮಾರ್ಚ 31 ರವರೆಗೆ) ಸಂಘಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಿ ದಾಸ್ತಾವೇಜುಗಳನ್ನು ದಾಖಲು ಪಡಿಸಿರಬೇಕು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು ಪರಿಶೀಲನೆಗೆ ಕಾಯ್ದಿರಿಸಬೇಕು.
6. ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 04-11-99 ರ ಮಾನ್ಯತೆ ನಿಯಮ 1999 ರ ನಿಯಮ 3 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರೌಢ ಶಿಕ್ಷಣ ರವರ ಸುತ್ತೋಲೆ ಸಂಖ್ಯೆ: ಪಿ8 (4) (7) ಶಾ.ಶಿ.ಅ.ನಿ.ಅ/01/02-03 ದಿನಾಂಕ : 13-12-02 ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ಆಡಳಿತ ಮಂಡಳಿ ಕಾರ್ಯದರ್ಶಿಗಳು ಹಾಗೂ ಸೂಚಿತ ಅಧಿಕೃತ ಪ್ರಾದಿಕಾರದ ಜಂಟಿ ಹೆಸರಿನಲ್ಲಿ ನಿರ್ವಹಿಸಿ ಕಾಲಕಾಲಕ್ಕೆ ನವೀಕರಣ ಮಾಡಿಸಿರಬೇಕು. ಸರ್ಕಾರದ ಆದೇಶ ಸಂಖ್ಯೆ: ಇಡಿ ಎಸ್ ಎಲ್ ಬಿ 2007 ದಿನಾಂಕ: 03-09-2007ರ ಅನುಬಂಧ-3 ರಲ್ಲಿನ ಚೆಕ್‌ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೊಂದಿರತಕ್ಕದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರತಕ್ಕದ್ದು.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ವಿವಿಧ 2004 ಬೆಂಗಳೂರು ದಿನಾಂಕ: 14-08-2006 ರ ಸೂಚನೆಗಳಂತೆ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸಿರಬೇಕು.
8. ಸರ್ಕಾರಿ ಆದೇಶ ಸಂಖ್ಯೆ ಇಡಿ 113 ಎಸ್.ಇ.ಎಸ್ 2005 ಬೆಂಗಳೂರು, ದಿನಾಂಕ 20ನೇ ಮಾರ್ಚ 2005 ರ ಸೂಚನೆಗಳನ್ವಯ ಸದರಿ ಹೆಚ್ಚುವರಿ ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಕರ್ಯ, ಶಿಕ್ಷಕರ ನೇಮಕಾತಿ ಹಾಗೂ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಬೇಕು.
9. ಇಲಾಖಾ ನಿಯಮಾನುಸಾರ ನಿಗಧಿತ ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿರಬೇಕು. ನಿಯಮಾನುಸಾರ ನಿಗದಿತ ಅರ್ಹತೆ ಹೊಂದದೇ ಇರುವ ಶಿಕ್ಷಕರನ್ನೇನಾದರೂ ನೇಮಕಾತಿ ಮಾಡಿಕೊಂಡಿದ್ದಲ್ಲಿ ಸದರಿರವರನ್ನು ಕೂಡಲೇ ತೆಗೆದು ಹಾಕಿ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳುವುದು. ತಪ್ಪಿದಲ್ಲಿ ಈ ಮಾನ್ಯತೆ ತಂತಾನೆ ರದ್ದಾಗುತ್ತದೆ.

10. ಶಾಲೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರತಿಯೊಬ್ಬ ಭೋದಕ/ಬೋದಕೇತರ ಸಿಬ್ಬಂದಿಗೂ ಸರ್ಕಾರದ ಆದಿಸೂಚನೆ ಸಂಖ್ಯೆ ಇಡಿ.104 ಎಸ್.ಇ.ಪೆ.2005 ದಿ. 12-01-2006 ರ ಸೂಚನೆಗಳನ್ವಯ ಸೇವಾ ವಿವರಗಳನ್ನೊಳಗೊಂಡ ಸೇವಾ ವಹಿಗಳನ್ನು ತೆರೆದು ಕಾಲಕಾಲಕ್ಕೆ ನಮೂದನೆಗಳನ್ನು ನಮೂದಿಸಿ ದೃಢೀಕರಿಸಿರುವುದು.

11. ಶಿಕ್ಷಕರಿಗೆ ಸರ್ಕಾರಿ ಆದೇಶಗಳಂತೆ ವೇತನಗಳನ್ನು ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ಪಾವತಿ ಮಾಡುತ್ತಿರುವ ಬಗ್ಗೆ ಹಾಗೂ ಯಾವುದೇ ಕಾರಣಕ್ಕೆ ನಗದು ನೀಡದಿರುವ ಬಗ್ಗೆ ಖಚಿತಪಡಿಸಿಕೊಂಡು ಸೇವಾಬದ್ರತೆ ನೀಡಿರುವ ಬಗ್ಗೆ ವರದಿಯಲ್ಲಿ ನಮೂದಿಸಿದ್ದಾರೆಯೇ?. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿಯವರಿಗೆ ದಿನಾಂಕ 12.01.2006 ರ ಸರ್ಕಾರದ ಆದೇಶದಂತೆ ಸೇವಾ ಬದ್ರತೆ ಒದಗಿಸಬೇಕು.

12. ಈ ಶಾಲೆ ಪ್ರಾರಂಭವಾದಗಿನಿಂದ ಸಂಸ್ಥೆ ಹಸ್ತಾಂತರ ಹಾಗೂ ಶಾಲೆ ಸ್ಥಳಾಂತರವಾಗಿದ್ದಲ್ಲಿ ಶಿಕ್ಷಣ ಕಾಯ್ದೆಯನುಸಾರ ಸದರಿ ಶಾಲೆಗೆ ಹೊಸದಾಗಿ ನೊಂದಣಿ ಪ್ರಥಮ ಮಾನ್ಯತೆ ಹಾಗೂ ಕಾಲಕಾಲಕ್ಕೆ ಮಾನ್ಯತೆಗಳನ್ನು ಪಡೆದಿರಬೇಕು.

13. ಪೋಲಿಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 157/ ಎಂಎಜಿ (1) ಇತರೆ /2014 ದಿನಾಂಕ: 26-07-2014ರ ಸೂಚನೆಗಳನ್ವಯ ಮಾನ್ಯ ಪೋಲಿಸ್ ಆಯುಕ್ತರು ಶಾಲೆಯಲ್ಲಿ ಮಕ್ಕಳ ಸುರಕ್ಷಾ ಹಿತದೃಷ್ಠಿಯಿಂದ 09 ಅಂಶಗಳ ಬಗ್ಗೆ ಮಾರ್ಗಸೂಚಿಗಳನ್ನು ಕೈಗೊಳ್ಳಲು ಶಾಲಾ ಆಡಳಿತ ಮಂಡಳಿಗಳಿಗೆ ನೀಡಿರುವ ಸೂಚನೆಗಳನ್ವಯ ಕ್ರಮ ಜರುಗಿಸಿರಬೇಕು.

14. ನಿಯಮಾನುಸಾರ ಎಲ್ಲಾ ರೀತಿಯ ಸುರಕ್ಷಿತಾ ಕ್ರಮಗಳನ್ನು ಕೈಗೊಳ್ಳಬೇಕು.

15. ಆರ್.ಟಿ.ಇ. ಅಡಿಯಲ್ಲಿ ಸದರಿ ಶಾಲೆ ನೋಂದಣಿಯಾಗಿರಬೇಕು..

16. ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.

17. ಅಗ್ನಿನಂದಕಗಳನ್ನು ಅಳವಡಿಸಿರುವ ಬಗ್ಗೆ ಪರಿಶೀಲಿಸಿ ಬೇಟಿ ವರದಿಯಲ್ಲಿ ನಮೂದಿಸತಕ್ಕದ್ದು.

18. ಶಾಲೆಯ 200 ಮೀಟರ್ ಸುತ್ತಳತೆಯಲ್ಲಿ ಧೂಮಪಾನ ನಿಷೇದ ಪ್ರಕಟಣ ಫಲಕವನ್ನು ಕಡ್ಡಾಯವಾಗಿ ಹಾಕಬೇಕು.

19. ಶಿಕ್ಷಣ ಕಾಯ್ದೆ 1983 ಜಾರಿಗೆ ಬಂದ ಮೇಲೆ ಅಸ್ಥಿತ್ವದಲ್ಲಿರುವ ಶಾಲೆಗಳಿಗೆ ನೋಂದಣಿ ಕಡ್ಡಾಯವಾಗಿದ್ದು, ನೋಂದಣಿ ಪಡೆದಿರಬೇಕು.

20. ಶಾಲಾ ವಾಹನಗಳ ನಿರ್ವಹಣೆಯ ಸಂಬಂದದಲ್ಲಿ ಸಾರಿಗೆ ಇಲಾಖೆರವರು ಹೊರಡಿಸಿರುವ ಆದೇಶದಲ್ಲಿನ ಸೂಚನೆಗಳನ್ನು ಪಾಲಿಸತಕ್ಕದ್ದು.

21. ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗ ದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು. ಈ ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪಾಲಿಸಿದ್ದಲ್ಲಿ ಮಾತ್ರ ಈ ಮಾನ್ಯತೆ ಅನ್ವಯಿಸುತ್ತದೆ.

22. 1 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಬೋಧನೆ ಮಾಡಲು ಶಿಕ್ಷಕರು ಕಡ್ಡಾಯವಾಗಿ ಖಿಜಚಿಛಿಜಡಿ ಇಟಗಿಜಿಚಿಛಿಣಿಥಿ ಖಿಜಚಿ (ಖಿಇಖಿ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. (ದಿನಾಂಕ : 09-06-2014 ರಿಂದ ಜಾರಿಗೆ ಬರುತ್ತದೆ) ಹಾಗೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಶಿಕ್ಷಕರನ್ನೇ ಆಡಳಿತ ಮಂಡಳಿಯವರು ನೇಮಕಾತಿ ಮಾಡಿಕೊಳ್ಳತಕ್ಕದ್ದು.

23. ಪ್ರತಿ ವರ್ಷ ಶಾಲೆಯ ದಾಖಲಾತಿಯನ್ನು ಏಪ್ರಿಲ್ 1ರ ನಂತರ ಪ್ರಾರಂಭಿಸಬೇಕು, ಈ ದಾಖಲಾತಿಯನ್ನು ಸರ್ಕಾರ ನಿಗದಿಪಡಿಸಿರುವ ಮೀಸಲಾತಿಯಂತೆ ಕಡ್ಡಾಯವಾಗಿ ಶಾಲಾ ಮಕ್ಕಳಿಗೆ ಮೀಸಲಾತಿಯಂತೆ ದಾಖಲಾತಿ ಮಾಡಿಕೊಳ್ಳುವುದು.

24. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ/709/ಪಿಜಿಸಿ/-2017 ದಿನಾಂಕ 07-03-2018 ರ ಆದೇಶದಂತೆ ಹಾಗೂ ಆಯುಕ್ತರ ಸುತ್ತೋಲೆ ಸಂಖ್ಯೆ;ಸಿ7/(2)ಪ್ರಾ.ಶಿ.ಅ/ಹೊ.ಶಾ.ನೊಂ./85/2017-18 ದಿ,26-03-2018 ರಂತೆ ಅನುಪಾಲಿಸುವ ಷರತ್ತಿನೊಂದಿಗೆ ಹಾಗೂ ಇಲಾಖೆಯು ಆಗಿದಾಂಗ್ಗೆ ಹೊರಡಿಸುವ ಸುತ್ತೋಲೆಯಂತೆ ಅನುಪಾಲಿಸುವ ಷರತ್ತು ಹಾಗೂ ಆನ್ ಲೈನ್ ನಲ್ಲಿ ಶುಲ್ಕ ಭರಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ. ಹಾಗೂ ಠೇವಣಿ,ಸ್ಥಿರನಿಧಿ,ಭದ್ರತಾ ಠೇವಣಿ ಮಾಹಿತಿ ಸಲ್ಲಿಸುವ ನಿಬಂಧನೆಯ ಮೇರೆಗೆ ಮಾನ್ಯತೆ ನೀಡಿದೆ. ಹಾಗೂ ಬಾಕಿ ಮಾಹಿತಿ ಜೂನ್-2019ರ ಮಾಹೆಯ ಒಳಗಾಗಿ ಸಲ್ಲಿಸುವ ನಿಬಂಧನೆಗೆ ಒಳಪಟ್ಟದೆ,

25. ಇಲಾಖೆಗೆ ದಿಕ್ಕು ತಪ್ಪಿಸುವಂತಹ ಮಾಹಿತಿಯನ್ನು ನೀಡಿದ್ದಲ್ಲಿ ಮತ್ತು ಯಾವುದೇ ತಂಟೆ ತಕರಾರುಗಳು ಇದ್ದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂಪಡೆದು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು

26. ಸರ್ಕಾರದ ಆದೇಶದ ಸಂಖ್ಯೆ:ಇಡಿ 587 ಪಿಜಿಸಿ 2018 ದಿನಾಂಕ 19-11-2018 ರಂತೆ ಕಟ್ಟಡದ ಎಲ್ಲಾ ಸುರಕ್ಷತಾ ಮತ್ತು ಇತರೆ ಕ್ರಮಗಳನ್ನು ಇಲಾಖಾ ವೆಬ್ ಸೆಟ್ ಅವಲೋಕಿಸಿ ಅನುಪಾಲನೆ ಮಾಡುವುದು. ತಪ್ಪಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು.

27. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರಪತ್ರದ ಸಂಖ್ಯೆ ಸಿ7(2)ಪ್ರಾ.ಶಿ.ಅ/ಮಾನ್ಯತೆ ಷರತ್ತು 23/2018-19 ದಿನಾಂಕ 30-11-2018 ಮತ್ತು 27-04-2019 ರಂತೆ ಸುರಕ್ಷತೆಗೆ ಕ್ರಮವಹಿಸಿ ವರದಿಸುವುದು

ಕ್ಷೇತ್ರಶಿಕ್ಷಣಾಧಿಕಾರಿಗಳು
ಉತ್ತರ ವಲಯ-4, ಯಲಹಂಕ

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ಉತ್ತರ ವಲಯ-04, ಯಲಹಂಕ
ಬೆಂಗಳೂರು - 560 064

1) ಕಾರ್ಯದರ್ಶಿಗಳು **ಇಮ್ಯಾನುಯಲ್ ಎಜುಕೇಶನ್ ಸೊಸೈಟಿ, ಅರೇಬಿಕ್ ಕಾಲೇಜು ಪೋಸ್ಟ್, ನಾಗವಾರ, ಬೆಂಗಳೂರು-45**

2) ಮುಖ್ಯಶಿಕ್ಷಕರು, **ಇಮ್ಯಾನುಯಲ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ನಾಗವಾರ, ಬೆಂಗಳೂರು-45**

3) ಕಛೇರಿ ಪ್ರತಿ

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ,BENGALURU NORTH ಜಿಲ್ಲೆ**

# ಮಾನ್ಯತೆ ನವೀಕರಣ ಪ್ರಮಾಣ ಪತ್ರ

**ಸಂಖ್ಯೆ :** 55206 **ದಿನಾಂಕ :** 13-Dec-2023

**ವಿಷಯ :** ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಯೊಳಗೆ ರಚಿತವಾಗಿರುವ ನಿಯಮಗಳನ್ವಯ ಶಾಲಾ ಮಾನ್ಯತೆಯನ್ನು ನೀಡುವ ಬಗ್ಗೆ.

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **IMMANUEL EDUCATION SOCIETY** ಆಡಳಿತ ಮಂಡಳಿಯು **29280719804** ಡೈಸ್ ಕೋಡ್ ಸಂಖ್ಯೆ **Immanuel English Nursery Primary and High School_OPP GLASS FACTORY** ಶಾಲೆಗೆ [ವಿಳಾಸ], **1_10** ತರಗತಿವರೆಗೆ **English** ಮಾಧ್ಯಮಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಲು ಆನ್ಲೈನ್ನಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಈ ಕೆಳಕಂಡಂತೆ ಮಾನ್ಯತೆಯನ್ನು ನವೀಕರಿಸಿದೆ.

| ಕ್ರ.ಸಂ. | ವಿವರ | ಆನ್ಲೈನ್ ಅರ್ಜಿ ಸಂಖ್ಯೆ : 55206 |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | **IMMANUEL EDUCATION SOCIETY** |
| 2 | ಶಾಲೆಯ ಹೆಸರು ಮತ್ತು ವಿಳಾಸ | **Immanuel English Nursery Primary and High School_OPP GLASS FACTORY** |
| 3 | ಡೈಸ್ ಕೋಡ್ ಸಂಖ್ಯೆ: | **29280719804** |
| 4 | ತರಗತಿ | **8 to 10** |
| 5 | ಮಾಧ್ಯಮ | **English** |
| 6 | ವಿಭಾಗ | **10** |
| 7 | ಶಾಲಾ ವಿಧ | **Pvt. Unaided /Renewal Recognition** |
| 8 | ಮಾನ್ಯತೆ ನವೀಕರಿಸಿರುವ ವರ್ಷ | **2023 2024 ಸಾಲಿನಿಂದ 2023 2024 ರವರೆಗೆ** |

ಷರತ್ತುಗಳು:

1. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009, ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅನುಸಾರ ಶಾಲೆಯನ್ನು ನೋಂದಾಯಿಸಿ, ನೋಂದಾಯಿಸಿದ ತರಗತಿವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. ಈ ತರಗತಿಗಳ ಹೊರತಾಗಿ ಹೆಚ್ಚುವರಿ ತರಗತಿಗಳನ್ನು ಮತ್ತು ಹೆಚ್ಚುವರಿ ವಿಭಾಗಗಳನ್ನು ನಡೆಸಲು ಅನುಮತಿ ಇರುವುದಿಲ್ಲ.

2. ಶಾಲೆಯು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

3. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ. [ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

4. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಭಂದಿಸಿದೆ.

5. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಭಂದಿಸಿದೆ.

6. ಶಾಲೆಯು / ಆಡಳಿತ ಮಂಡಳಿಯು ತಮ್ಮ ಶಾಲೆಯಲ್ಲಿ ಮಕ್ಕಳ ಪೋಷಕರಿಂದ ವ್ಯಾಸಂಗ ಶುಲ್ಕವಾಗಿ ವಸೂಲು ಮಾಡುವ ಶುಲ್ಕದ ಮಾಹಿತಿಯನ್ನು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ:31:ಪಿಜಿಸಿ:2019, ದಿನಾಂಕ:27.07.2019ರನ್ವಯ ಮಾಹಿತಿಗಳನ್ನು ಇಲಾಖಾ ವೆಬ್ಸೈಟ್ನಲ್ಲಿ ಹಾಗೂ ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದೆ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತøತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ಮಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರೆ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.

11. ಶಾಲೆಯು ಸಂಯೋಜಿತವಾಗಿರುವ ಶೈಕ್ಷಣಿಕ ರಾಜ್ಯ ಪಠ್ಯಕ್ರಮ ಮತ್ತು ರಾಜ್ಯ ಪಠ್ಯ ಪುಸ್ತಕಗಳನ್ನು ಅನುಸರಿಸುವುದು.

12. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 19ರಲ್ಲಿ ನಿರ್ದಿಷ್ಟಪಡಿಸಿದಂತೆ ಶಾಲೆಯು ನಿಯಮಗಳು ಮತ್ತು ಮಾನದಂಡಗಳನ್ನು ನಿರ್ವಹಿಸುವುದು. ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಿರುವಂತೆ ಇಲಾಖಾ ಸಿಬ್ಬಂದಿಗಳನ್ನು ನೇಮಿಸುವುದು.

13. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.

14. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.

15. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

16. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ 2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.

17. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.

18. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.

19. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.

20. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

21. ಶಾಲಾ ಮಾನ್ಯತೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಉಪನಿರ್ದೇಶಕರು(ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

**BENGALURU NORTH**
**(2928)** ಜಿಲ್ಲೆ

ಗೆ,

1. ಸಂಬಂಧಿಸಿದ ಆಡಳಿತ ಮಂಡಳಿ **IMMANUEL EDUCATION SOCIETY**

2. ಮುಖ್ಯ ಶಿಕ್ಷಕರು, /**OPP GLASS FACTORY**/**Immanuel English Nursery Primary and High School**ಶಾಲೆ ಮತ್ತು ವಿಳಾಸ

3. ಕ್ಷೇತ್ರ ಶಿಕ್ಷಣಾಧಿಕಾರಿಗಳು ,**NORTH4 (292807)** ತಾಲ್ಲೂಕು/ವಲಯ **BENGALURU NORTH (2928)** ಜಿಲ್ಲೆ.

4. ಕಛೇರಿ ಪ್ರತಿ.

Digitally signed by LOHITHESWARA REDDY K P
Date: 2024.01.02 12:32:16 +05:30

**Office of the Field Education Officer, Bangalore North Zone-04, Yelahanka, Bangalore North District Bangalore-64**

Form-03

(Rule 4 as sub-rule (6) 3)

No.: C1.Anu.Praa.Sha.Recognition-26/2020-21 Date : 07-08-2020

**It is certified the school Immanuel English Higher Primary School, Nagavara, Bangalore 45** run by the governing body of **Immanuel Education Society, Arabic College Post, Nagavara, Bangalore-45** on this date as per Section 38 of the Karnataka Education Act, 1983 (Karnataka Act No: 1-1995) has been granted provisional Accreditation/Recognition.

| | | |
|---|---|---|
| 1. | Registration no | 26/2020-21 |
| 2. | School Address | **Immanuel English Higher Primary School, Nagawara,Bangalore-45** |
| 3. | Already issued Certificate No | 175/2016-17 |
| 4. | Recognized Medium | Class 1-7 English medium |
| 5. | Is the school subsidized or not? | Permanently unfunded |
| 6. | Recognized classes | Class 1-7 English Medium for each section |
| 7. | Name of the visited Recommending Officer/Employee | Field Education Officer, B.U.O.-04, Yelahanka |

The above school has been accredited as per Karnataka Education Code rule 36,6B for **five (5 years**) from 2020-21 to 2024-25 subject to the following conditions.

**This certificate has been issued subject to the following conditions.**

1.Rules of Karnataka Education Act 1983 Karnataka Act 1 of 1995 and circulars and orders issued by the Government and Department from time to time should be strictly followed.

2.Karnataka Educational Institutions, Classification, Regulation and Curriculum Regulation Regulations 1005 Circular Notification No: 116 Miscellaneous 95 Dated: 14-11-95 Rule 4, 5, 6 and 8 of the State Curriculum shall have school safety and basic amenities,

3. Karnataka Education Act 1983 Karnataka Act 1 of 1995 Karnataka Educational Institutions, Classification, Regulation and Curriculum Regulation Regulations 1995 Govt Notification No: ED 116 Misc 95 Dated: 11-95 as per rule 10 of 1995 should only charge tuition fees, special development fees and should have taken action as per rule 19 (4).

4. The school should be conducted in the medium and at the same place as sanctioned by Section 41 (5) of the Karnataka Education Act, 1983. No transfer and transfer of school will be allowed for 5 years after permission is granted. Usually only one transfer is allowed. In case of transfer/handover after this period, fresh registration at the new place shall be approved.

5.As per the Karnataka State Registration of Societies Act 21 1960 Ordinance No. 9 of 1957 Act 13, the accounts up to the previous year (up to March 31) should be submitted to the Registrar of Societies and the documents recorded. And the documents of the list of members of the executive committee of the said organization should be approved and the receipt and approval list should be maintained for review.

6.Education Act 1983 Government Notification ED 131 Misc 98 Dated: 04-11-99 Accreditation Rule 1999 as per Rule 3 Sub-Rule 2 and Director of Secondary Education Circular No.: Sim (4) (7) Sha.Shi.A.N. A/01/02-03 Dated : 13-12-02 As per the rules fixed fund deposits should be maintained at the prescribed rates in the joint name of the Secretary of the Governing Body and the prescribed authorized authority and updated from time to time. Government Order No: EDSLB 2007 Dated: 03-09-2007 Annexure-3 Stone Checklist shall have all information documents and these rules shall be strictly followed.

7. Accounts and records should be maintained as per the instructions of Government Notification No: ED 74 Miscellaneous 2004 Bangalore Dated: 14-08-2006.

8. Government Order No: ED 113 S.E.S: 2015 Bangalore, dated 20th March 2005 should provide basic infrastructure, recruitment of teachers and all other facilities for additional sections of Savari.

9. Teachers with prescribed and qualified qualifications should be recruited as per departmental rules. If any teacher is recruited who does not have the prescribed qualification as per the rules, the said teachers shall be immediately removed. Failure to do so will automatically void this accreditation.

10. Government Notification No. ED.104 S.E.P.2005 for every teaching/non-teaching staff to be recruited in the school. As per instructions dated 12-01-2006 service records containing service details are opened and entries are made and confirmed from time to time.

11. Has it been mentioned in the report that the salaries are being paid to the teachers through bank savings accounts as per government orders and that they have not been given cash for any reason? Teachers and staff on duty in the school should be provided with service security as per Government order dated 12.01.2006.

12.In case the institution has been transferred and the school has shifted since the school started, the school should have received first accreditation and accreditation from time to time as per the Education Act.

13. Commissioner of Police, Bangalore City, vide his order No: 157/ MAG (1) Other /2014 dated: 26-07-2014 Hon'ble Commissioner of Police the school management boards should have taken action as per the instructions given to implement 09 guidelines on aspects of safety in the interest of children in school.

14. All safety measures should be taken as per rules.

15. The said school should be registered under R.T.E...

16. No corporal punishment should be given to school children.

17. Installation of fire hydrants should be checked and mentioned in the visit report.

18. A no smoking notice board should be compulsorily placed within 200 meters of the school.

19. Registration is compulsory for existing schools after the Education Act, 1983 came into force and should have been received
20. The instructions in the order issued by the Transport Department regarding the maintenance of school vehicles shall be followed.
21. The stairs leading to the upper floors of the school should not be narrow. If safety walls are not constructed at each floor or very small walls are constructed, precautionary measures should be taken in this regard. Lastly, it should be ensured that there are 5 feet retaining walls. Grilles should be installed so as not to obstruct the ventilation system.
This recognition is applicable only if all the above conditions are fulfilled.

22. To teach children studying in classes 1 to 5, teachers must have passed Khichichijd Itamathi Khiza (IEKHI) examination. (Date : 09-06-2014) and the management board should recruit the teachers who have passed the examination.

23. Every year the school enrolment should start after 1st April, this enrolment of school children should be done for reservation as prescribed by Govt compulsorily.

24. Government Circular No: ED/709/PGC/-2017 vide order dated 07-03-2018 and Commissioner's Circular To:7/(2).B./..../85/2017-18 8,26- 03-2018 with the condition of compliance and subject to the condition of compliance as per the circular issued by the department from time to time and the provision of online fee payment. And given recognition on the provision of deposit, fixed fund, security deposit information. And the pending information is subject to the provision of submission within the month of June-2019.

25. If any misleading information is provided to the department and there are any disputes, the accreditation will be withdrawn and criminal proceedings will be initiated as per rules.

26. Government Order No: ED 587 PGC 2018 dated 19-11-2018 to review and comply with departmental website of all safety and other measures of the building. If defaulted, further action will be taken as per rules.

27. Action taken Report to the Hon'ble Commissioner Public Education Department, Bangalore vide letter No. C7(2) P.S.A/Accreditation Clause 23/2018-19 dated 30-11-2018 and 27-04-2019 for safety.
17/8/20

Field Education Officer
North Zone-4, Yalahanka,

1) Secretary Immanuel Education Society,Arabic College PO Nagawara, Bangalore-45
2) Headmistress, Immanuel English Higher Primary School, nagavara ,Bangalore -45
3) Office Copy

**Government of Karnataka**
**Department of Public Education**
**OFFICE OF THE DEPUTY DIRECTOR, PUBLIC INSTRUCTION DEPARTMENT, BENGALURU NORTH DISTRICT**

**Accreditation Renewal Certificate**

**No:**55206 Date : 13-Dec-2023

**Subject** : Regarding grant of school recognition as per rules framed under Child Rights Education Act 2009 and Karnataka Education Act 1983.

&&&&&

In relation to the above, the governing body of **IMMANUEL EDUCATION SOCIETY** Dice Code No. 29280719804 **Immanuel English Nursery Primary and High School OPP GLASS FACTORY School** [Address], for renewal of school accreditation for English medium upto class 1 10 has been verified by the officials of the department in the application submitted by the department officials.

| Sl.No. | Detail | Online Application Number :55206 |
|---|---|---|
| 1. | Name and Address of Governing Body | **IMMANUEL EDUCATION SOCIETY** |
| 2. | Name and address of the school | **Immanuel English Nursery Primary and High School_OPP GLASS FACTORY** |
| 3. | DICE CODE NO: | **29280719804** |
| 4. | Class | **8 to 10** |
| 5. | Medium | **English** |
| 6. | Division | **10** |
| 7. | Type of school | **Pvt. Unaided /Renewal Recognition** |
| 8. | Year of renewal of accreditation | **2023 from 2024 to 2023**<br>**Until 2024** |

**Conditions:**

1. The school is registered under the Child Rights Education Act, 2009, and the Karnataka Education Act, 1983 and the rules framed thereunder, and the accreditation is renewed up to the registered class. Apart from these classes, additional classes and extra sections are not permitted.
2. The school shall function under the rules framed under the Karnataka Education Act 1983 and the Child Rights Education Act 2009.
3.As per Child Rights Education Act 2009 to reserve 25% seats for weaker section children under the rules framed thereunder. The Government has the authority to enroll the reserved seats under RTE for the schools covered by RTE. [Government has made rules to facilitate the enrollment of children in neighboring schools where their parents live, according to which, if there are government and government-funded educational institutions, children will be enrolled in that school] Otherwise, private schools will enroll children enrolled by the government and allow them to continue their education up to the primary level. To enable these children to continue their education without any discrimination.
4. Government releases fees of children enrolled under RTE rules as described in clause 3, Hence the school should not charge any fees from these children.

5. The school and the school management are prohibited from collecting any kind of capitation fee and voluntary donations from the parents either at the time of enrollment or later.
6. The school / The management board will publish the information on the fees collected from the parents of the children in their school as tuition fees in the departmental website and on the school notice board as per the State Government Notification No: ED:31:PGC:2019, dated:27.07.2019. No fee shall be charged in excess of the prescribed fee.
7. The school / The governing body enrolls the students within the period fixed by the government.
8. The School / Governing Body cannot refuse enrollment against the following points.
(i) Due to lack of proof of age,
(ii) On the basis of caste, religion, place of birth, language
(iii) If admission is sought after extended period of admission.
9. Carrying out all safety measures as per RTE Act and Rules, Karnataka Education Act and Rules. [Fire safety and building safety certificate from concerned authorities and child learning safety as per K.S.C.P.C.R and N.C.P.C.R].
10. The school / The governing body shall:
(i) No admitted child shall be retained in any class or expelled from the school until he completes primary and secondary education in the school.
(ii) No child shall be subjected to physical or mental abuse.
(iii) No child shall be required to pass any board examination till completion of primary education.
(iv) Every child who completes primary education is issued a certificate as prescribed under Rule 21 of RTE and the Karnataka Education Act and Rules.
(v) The school has special needs as per the provisions of the RTE Act and Rules and the Karnataka Education Act and Rules. Children with special needs should also be included.
(vi) Appointed teachers shall possess the minimum qualifications as prescribed for primary and high school teachers in the RTE Act and Rules and the Karnataka Education Act and Rules and Government Orders.
(vii) Salary and allowances payable to teachers and terms and conditions of service shall be as prescribed by the State Government. Salaries and other payables are paid to teachers through government notification [Prospective Fund (P)] and payable bank and subject to Employee State Insurance (ESI).
(viii) Teachers shall perform the duties prescribed under Section 24[1] of the Act and the RTE Act and Rules and Rule 178 of the Karnataka Education Act and Rules and shall not engage themselves in private tuitions for supervisory considerations.
11. Adherence to the academic state curriculum and state text books to which the school is affiliated.
12. The school shall maintain rules and standards as specified in Section 19 of the Karnataka Education Act. Appointment of departmental staff as prescribed in the Karnataka Education Act and Rules.
13. School buildings and other basic facilities associated with the school should not be given over to any commercial activities or political and non-educational activities during the day or night.
14. The school shall not be run for the benefit of any person or group or association.
15. Get the school audited by a Chartered Accountant and submit the copy to the Deputy Director / Field Education Officer by the end of June every year.
16. The school shall follow the language policy as per Government Notification [Kannada Language Policy 2016].
17. Governing body and teachers to act as per RTE Act and Karnataka Education Act and Rules.
18. School/The governing body shall follow the rules and directives of the government and the department without fail.
19. Mandatory updating of school information in S.A.T.S. by the end of March every year.
20. Violation of the above conditions will result in the cancellation of the recognition of the school as per the rules framed under the RTE Act 2009 and the Karnataka Education Act 1983.

21. After the school accreditation process is completed, the entire document information in the application submitted online by the governing body will be made available for public viewing on the departmental website.
22. Violation of the above conditions will result in the cancellation of the recognition of the school as per the rules framed under the RTE Act 2009 and the Karnataka Education Act 1983.

Deputy Director (Administration)<br>Department of Public Education<br>BENGALURU NORTH<br>(2928)

To

1. Concerned Governing body IMMANUEL EDUCATION SOCIETY
2. Headmistress, OPP GLASS FACTORY Immanuel English Nursery Primary and High School
3. Field Education Officers NORTH4 (292807) Taluk/Zone BENGALURU NORTH (2928) Dist.
4. Office copy.